C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ 39/2021

ದಿನಾಂಕಃ 04.08.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ : 16 ಪಿ. ಡಬ್ಲ್ಯೂ : 11

| | |
|---|---|
| ಸಾಕ್ಷಿದಾರರ ಹೆಸರು | ಟಿ ಲಿಂಗರಾಜು |
| ತಂದೆಯ ಹೆಸರು | ಟಿ ತೋಪಯ್ಯ |
| ವಯಸ್ಸು | 53 ವರ್ಷ |
| ಉದ್ಯೋಗ | ಎಎಸ್ಐ, ಪೂರ್ವ ಪೊಲೀಸ್ ಠಾಣೆ, ಮಂಡ್ಯ. |
| ವಾಸ | ಮಂಡ್ಯ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು 2019 ರಿಂದ 2 ವರೆ ವರುಷಗಳ ಕಾಲ ನಾನು ಹೆಚ್ ಸಿ ಯಾಗಿ ಮತ್ತು ಎಎಸ್ಐ ಆಗಿ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.09.2020 ರಂದು ನನಗೆ ಹಾಗೂ ಚಾಸಾ 17 ರಿಂದ 19 ರವರಿಗೆ ರ ಪ್ರಕರಣದ ಮೊ.ನಂಃ 105/2020 ರಲ್ಲಿ ಇರುವ ಆರೋಪಿಗಳಾದ ಶಂಕರ , ಶ್ರೀನಿಧಿ, ಸಿದ್ದಪ್ಪ, ಲಕ್ಷ್ಮೀ, ಗೀತಾ, ಚಿಕ್ಕ ವೀರಭದ್ರ ರವರುಗಳ ಪತ್ತೆಗಾಗಿ ನೇಮಕ ಮಾಡಿದ್ದು ಅದರಂತೆ ನಾವುಗಳು ಅದೇ ದಿನ ಠಾಣೆಯಿಂದ ಸಂಜೆ 6.30 ಗಂಟೆಗೆ ಹೊರಟು, ಸುಭಾಷ್ ನಗರ, ವಿವಿ ನಗರಗಳ ಕಡೆ ಗಸ್ತು ಮಾಡುತ್ತಿದ್ದಾಗ ವಿವಿ ನಗರ, 6 ನೇ ಕ್ರಾಸ್ ನಲ್ಲಿ ಈ ಕೇಸಿನ ಆರೋಪಿಯಾದ ಶ್ರೀನಿಧಿ ರವರ ಚಿಕ್ಕಮ್ಮನ ಮನೆಯಲ್ಲಿ ಆರೋಪಿಗಳು ಇರುವುದಾಗಿ ಬಾತ್ಮಿದಾರರಿಂದ ಮಾಹಿತಿಯನ್ನು ಖಚಿತ ಪಡಿಸಿಕೊಂಡು ರಾತ್ರಿ 8.45 ಕ್ಕೆ 6 ನೇ ಕ್ರಾಸ್‌ನ ಶ್ರೀನಿಧಿ ರವರ ಚಿಕ್ಕಮ್ಮನ ಮನೆಗೆ ಬಂದು ಅಲ್ಲಿ ಇದ್ದ ಶ್ರೀನಿಧಿ, ಲಕ್ಷ್ಮಿ ಮತ್ತು ಗೀತಾ ರವರನ್ನು ವಶಕ್ಕೆ ಪಡೆದುಕೊಂಡು ರಾತ್ರಿ 9.00 ಗಂಟೆಗೆ ಠಾಣೆಗೆ ಹೋಗಿ ಚಾಸಾ 24 ರವರ ಮುಂದೆ ಲಿಖಿತ ವರದಿಯೊಂದಿಗೆ ಅವರನ್ನು ಹಾಜರು ಪಡಿಸಿದೆವು. ಸದರಿ ವರದಿಯನ್ನು ನಿಪಿ 46 ಎಂದು, ಸಾಕ್ಷಿಯ ಸಹಿಯನ್ನು ನಿಪಿ 46(ಎ) ಎಂದು ಗುರುತಿಸಲಾಯಿತು. ನಿಪಿ 46 ವರದಿಗೆ ಚಾಸಾ 17 ರಿಂದ 19 ಸಿಬ್ಬಂದಿಗಳು ಸಹಿ ಮಾಡಿದ್ದಾರೆ.

ದಿಃ 01.10.2020 ರಂದು ಈ ಕೇಸಿನ ಉಳಿದ ಆರೋಪಿತರಾದ ಶಂಕರ , ಸಿದ್ದಪ್ಪ, ವೀರಭದ್ರ ರವರ ಪತ್ತೆ ಬಗ್ಗೆ ನನಗೆ ಮತ್ತು ಚಾಸಾ 20 ರವರಿಗೆ ನೇಮಕ ಮಾಡಿದ್ದು ಅದರಂತೆ ನಾವುಗಳು ಠಾಣೆಯಿಂದ ಬೆಳಿಗ್ಗೆ 9.00 ಕ್ಕೆ ಹೊರಟು, ಶಂಕರ ಮಠ , ಪೇಟೆ ಬೀದಿ, ಆನೇಕೆರೆ ಬೀದಿಗಳ ಕಡೆ ಗಸ್ತು ಮಾಡಿಕೆಂಡು ಇದ್ದಾಗ ಆರೋಪಿಯಾದ ಶಂಕರ್ ರವರು ಕಾರಿಮನೆ ಗೇಟ್ ನಲ್ಲಿ ಇರುವುದಾಗಿ ಖಚಿತ ಪಡಿಸಿಕೊಂಡು 9.45 ಕ್ಕೆ ಕಾರೆಮನೆ ಗೇಟ್ ಬಳಿ ಬಂದು, ಶಂಕರ್ ರವರನ್ನು ವಶಕ್ಕೆ ಪಡೆದುಕೊಂಡು ಬೆ. 10.00 ಕ್ಕೆ ಚಾಸಾ 24 ರವರ ಮುಂದೆ ಲಿಖಿತ ವರದಿಯೊಂದಿಗೆ ಅವರನ್ನು ಹಾಜರು ಪಡಿಸಿದೆವು. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ 47 ಎಂದು, ಸಾಕ್ಷಿಯ ಸಹಿಯನ್ನು ನಿಪಿ 47(ಎ) ಎಂದು ಗುರುತಿಸಲಾಯಿತು.

ನಾವು ವಶಕ್ಕೆ ತಗೆದುಕೊಂಡಿದ್ದ ಆರೋಪಿಗಳು ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದ ಃ</u>

ಆರೋಪಿಗಳ ಪತ್ತೆಗಾಗಿ ನಮ್ಮನ್ನು ನೇಮಕ ಮಾಡಿದ್ದಕ್ಕೆ ನಮಗೆ ನೇಮಕಾತಿ ಪತ್ರವನ್ನು ಕೊಟ್ಟಿರಲಿಲ್ಲ ಆದರೆ ನಮ್ಮ ಠಾಣೆಯ ಸ್ಟೇಷನ್ ಹೌಸ್ ಡೈರಿಯಲ್ಲಿ ನಮೂದಿಸಿರುತ್ತಾರೆ. ಈ ರೀತಿ ನಮ್ಮನ್ನು ನೇಮಕ ಮಾಡಿದ ದಿನಾಂಕದಂದು ಚಾಸಾ 24 ರವರು ಎಸ್ ಎಸ್ ಓ ಆಗಿದ್ದರು. ನಮ್ಮನ್ನು ನೇಮಕ ಮಾಡಿದ ಬಗ್ಗೆ ಅದನ್ನು ಸ್ಟೇಷನ್ ಹೌಸ್ ಡೈರಿಯಲ್ಲಿ ಯಾರು ನಮೂದಿಸಿದ್ದರು ಎಂದರೆ ಸಾಕ್ಷಿಯು ಸಾಮಾನ್ಯವಾಗಿ ಚಾಸಾ 24 ರವರೇ ಮಾಡಿರುತ್ತಾರೆ, ನನಗೆ ಸರಿಯಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಸಿಬ್ಬಂದಿಗಳು ಸುಭಾಷ್ ನಗರದಲ್ಲಿ ಗಸ್ತು ಮಾಡುತ್ತಿರುವಾಗ ನಮ್ಮ ಜೊತೆ ಬಾತ್ಮಿದಾರರು ಇರಲಿಲ್ಲ. 2, 5 ಮತ್ತು 7 ನೇ ಆರೋಪಿತರು ಬೇರೆ ಕೇಸಿಗೆ ಮನೆಯ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಠಾಣೆಗೆ ಬೇರೆಯವರೊಂದಿಗೆ ಬಂದಿದ್ದಾಗ ಪರಿಚಯ ಆಗಿತ್ತು. ಆಗ ನಾನು 2 ನೇ ಆರೋಪಿ ಶ್ರೀನಿಧಿಯನ್ನು ನೋಡಿದ್ದೆನು. 2 ನೇ ಆರೋಪಿತ ಶ್ರೀನಿಧಿ ನಮ್ಮ ಠಾಣೆಗೆ 2020 ನೇ ಇಸವಿಯಲ್ಲಿ ಸದರಿ ಪ್ರಕರಣ ನಡೆಯುವುದಕ್ಕಿಂತ ಹಿಂದಿನ ದಿನಗಳಲ್ಲಿ ಬಂದಿದ್ದರು.

5 ನೇ ಆರೋಪಿತೆ ಲಕ್ಷ್ಮೀ ಮತ್ತು 7 ನೇ ಆರೋಪಿತೆ ಗೀತಾ ರವರನ್ನು ನೋಡಿರಲಿಲ್ಲ. 5 ಮತ್ತು 7 ನೇ ಆರೋಪಿತರ ಪತ್ತೆಗಾಗಿ ಅವರ ಮುಖದ ಚಹರೆಯನ್ನು ಬಾತ್ಮಿದಾರರಿಂದ ಸಂಗ್ರಹಿಸಿಕೊಂಡಿರಲಿಲ್ಲ. 2 ನೇ ಆರೋಪಿತ ಶ್ರಿನಿಧಿ ರವರ ಚಿಕ್ಕಮ್ಮನ ಮನೆಯ ಹತ್ತಿರ ಹೋದಾಗ ರಾತ್ರಿ 8.30 ಆಗಿತ್ತು. 2 ನೇ ಆರೋಪಿತ ಶ್ರಿನಿಧಿ ರವರ ಚಿಕ್ಕಮ್ಮನ ಮನೆಯಲ್ಲಿ,

ಶ್ರೀನಿಧಿ ರವರ ಚಿಕ್ಕಪ್ಪ, ಚಿಕ್ಕಮ್ಮ ವಾಸವಾಗಿದ್ದರು. ಚಿಕ್ಕಮ್ಮನ ಮನೆಯಲ್ಲಿ ಆರೋಪಿಯನ್ನು ಪತ್ತೆ ಮಾಡಿದ ಬಗ್ಗೆ ಫೋಟೋವನ್ನು ತೆಗೆಸಲಿಲ್ಲ. 2 ಮತ್ತು 5 ನೆ ಆರೋಪಿತರನ್ನು ಚಿಕ್ಕಮ್ಮನ ಮನೆಯಲ್ಲಿ, ಬಂಧಿಸಿಲ್ಲ ಎಂದರೆ ಸರಿಯಲ್ಲ. ಅವರುಗಳ ಮನೆಯಲ್ಲಿ ಇದ್ದವರನ್ನು ಕರೆದುಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯನ್ನು ನಾನು ಈ ಮೊದಲು ನೋಡಿದ ಪರಿಚಯ ಇತ್ತು. 1 ನೇ ಆರೋಪಿಯನ್ನು ಈ ಪ್ರಕರಣದ ಹಿಂದಿನ ದಿನಗಳಲ್ಲಿ ಮತ್ತು ಗಸ್ತಿಗೆ ಹೋಗುತ್ತಿದ್ದಾಗ ನೋಡಿದ್ದೇನೆ. 1 ನೇ ಆರೋಪಿಯು ಗಲಾಟೆಗೆ ಕಾರಣವಾಗಿದ್ದ ಮನೆಯ ವಿಚಾರದಲ್ಲಿ ಪೊಲೀಸ್ ಠಾಣೆಗೆ ಬರುತ್ತಿದ್ದರು. 1 ನೇ ಆರೋಪಿತ ಮಿಕ್ಕೆರೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು. 1 ನೇ ಆರೋಪಿಯನ್ನು ದಸ್ತಗಿರಿ ಮಾಡಿದ ಕಾರೆಮನೆ ಗೇಟ್ ಬಳಿ ಸಂಬಂಧಪಟ್ಟಂತೆ ಫೋಟೋವನ್ನು ತೆಗೆಸಿರಲಿಲ್ಲ. ನಾನು ಕಾರೆಮನೆ ಗೇಟ್ ಬಳಿ ಹೋಗಿರಲಿಲ್ಲ ಮತ್ತು 1 ನೇ ಆರೋಪಿಯನ್ನು ಕಾರೆಮನೆ ಗೇಟ್ ಬಳಿ ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ಇದ್ದ 1 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಏನೂ ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.